ದಿನಾಂಕಃ **20.06.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ವಿ ಎಂ / ಎಂ ಬಿ ವಕೀಲರಿಂದಃ**

ವಾದಿಯರಿಗೆ ಕ್ರಯಪತ್ರ ಮಾಡಿಕೊಡಬೇಕಾಗುತ್ತದೆ ಎಂದು ನೀವು, ನಿಮ್ಮ ತಾಯಿ ಲಕ್ಷ್ಮೀದೇವಮ್ಮ ನವರನ್ನು ವೃದ್ಧಾಶ್ರಮಕ್ಕೆ ಸೇರಿಸಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಆ ರೀತಿ ವೃದ್ಧಾಶ್ರಮಕ್ಕೆ ಸೇರಿಸುವ ಸಮಯದಲ್ಲಿ ಆ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದಿರಿ ಎಂದರೆ ಸಾಕ್ಷಿ ಇಲ್ಲ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ವೈ ಎನ್ ಹೊಸಕೋಟೆಯ ಹಲವು ಜನರ ಬಳಿ ಬಹಳ ಸಾಲ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಮಾಡಿದ ಸಾಲವನ್ನು ತೀರಿಸಲು ನೀವಾಗಲೀ, ನಿಮ್ಮ ಕುಟುಂಬದ ಯಾವುದೇ ಸದಸ್ಯರಾಗಲೀ ತೀರಿಸಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದರೆ ಸಾಕ್ಷಿ ಅವರು ಸಾಲವನ್ನೇ ಮಾಡಿರಲಿಲ್ಲ ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ಪ್ರಮಾಣ ಪತ್ರದ ಖಂಡಿಕೆ 3 ರಲ್ಲಿ ವಾದಿಯರು ದಾವಾ ಸ್ವತ್ತಿನ ಮೂಲ ಕ್ರಯಪತ್ರವನ್ನು ಕಳುವು ಮಾಡಿದ್ದಾರೆ, ನಮ್ಮ ತಾಯಿ ಎಂದೂ ಆ ಪತ್ರವನ್ನು ವಾದಿಯರಿಗೆ ಕೊಟ್ಟಿಲ್ಲ ಎಂದು ಸುಳ್ಳು ಹೇಳಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಸುಮಾರು 15 ವರ್ಷಗಳ ಹಿಂದೆಯೇ ಅದು ಕಳುವಾಗಿದ್ದು, ಅದಕ್ಕಾಗಿ ನಾನು ಸಬ್‌ರಜಿಸ್ಟರ್ ಕಛೇರಿಯಲ್ಲಿ ಅದರ ನಕಲು ಪಡೆಯಲು ಅರ್ಜಿ ಸಲ್ಲಿಸಿ ನಕಲು ಪಡೆದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. 2009 ರಲ್ಲಿ ನಾನು ಸಬ್‌ರಜಿಸ್ಟರ್ ಕಛೇರಿಯಲ್ಲಿ ಕ್ರಯಪತ್ರದ ನಕಲು ಕೋರಿ ಅರ್ಜಿ ಸಲ್ಲಿಸಿರುತ್ತೇನೆ ದಿನಾಂಕ ಮತ್ತು ತಿಂಗಳು ಜ್ಞಾಪಕವಿಲ್ಲ. 2009 ರಲ್ಲಿ ನೀವು ಕ್ರಯಪತ್ರದ ನಕಲು ಪಡೆದುಕೊಂಡಲ್ಲಿ ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಏನು ಇಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಕ್ರಯಪತ್ರ ಕಳೆದು ಹೋಗಿದೆ ಎಂದು ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುವುದಿಲ್ಲ. 2009 ರಲ್ಲಿ ಕ್ರಯಪತ್ರ ಕಳೆದು ಹೋಗಿದೆ

ಎಂಬ ಕಾರಣಕ್ಕೆ ನೀವು ನಕಲನ್ನು ಪಡೆದಿಲ್ಲ, ಬೇರೆ ಯಾವುದೋ ಕಾರಣಕ್ಕೆ ಅದರ ನಕಲನ್ನು ಪಡೆದು ನ್ಯಾಯಾಲಯದಲ್ಲಿ ಹಾಜರುಪಡಿಸಿ ಈಗ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ವಾದಿಯರು ನ್ಯಾಯಾಲಯದಲ್ಲಿ ಮೂಲ ಕ್ರಯಪತ್ರವನ್ನು ಹಾಜರುಪಡಿಸಿದ ನಂತರವಾದರೂ ನೀವು ಅವರಿಗೆ ನೋಟಿಸ್ ಏನಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಲಕ್ಷ್ಮೀದೇಮ್ಮ ಒಬ್ಬರೇ ವೈ ಎನ್ ಹೊಸಕೋಟೆಯ ಮನೆಯಲ್ಲಿ ವಾಸವಿದ್ದರು ಹಾಗಾಗಿ ನಿಮಗೆ ಏನು ಗೊತ್ತಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು, ಗಂಗಾಧರಯ್ಯ, ಲೋಕೇಶ್ ಮತ್ತು ಗೀರಿಶ ಮತ್ತು ಸಹೋದರಿಯರು ಸೇರಿ ಬೇರೆಯವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಬೇಕು ಎಂಬ ಉದ್ದೇಶದಿಂದ ಈ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು ನಿಮ್ಮ ತಾಯಿಯ ಸ್ವಯಾರ್ಜಿತ ಸ್ವತ್ತು ಅದು ಪಿತ್ರಾರ್ಜಿತ ಸ್ವತಲ್ಲ ಎಂದರೆ ಸಾಕ್ಷಿ ನಾನು ಮತ್ತು ನನ್ನ ಅಣ್ಣ ಕೊಟ್ಟಂತಹ ಹಣವನ್ನು ಕೂಡಿಸಿ ನನ್ನ ತಾಯಿಯ ಹೆಸರಿನಲ್ಲಿ ಕೊಂಡಿರುವ ಸ್ವತ್ತು ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಅಣ್ಣ ಗಂಗಾಧರಯ್ಯ ಹಣ ಕೊಟ್ಟು ದಾವಾ ಸ್ವತ್ತನ್ನು ತಾಯಿಯ ಹೆಸರಿಗೆ ಖರೀದಿಸಿರುವುದಾಗಿ ಏನಾದರೂ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತು ನಿಮ್ಮ ತಾಯಿ ಲಕ್ಷ್ಮೀದೇವಮ್ಮ ನವರು ಸ್ವಯಾರ್ಜಿತವಾಗಿ ಕೊಂಡಿರುವಂತಹ ಸ್ವತ್ತು, ನಿವ್ಯಾರು ಹಣ ಕೊಟ್ಟಿಲ್ಲ ಆದರೂ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದ ಖಂಡಿಕೆ 6 ರಲ್ಲಿ ನಿಮ್ಮ ತಂದೆ ತೀರಿಕೊಂಡ ನಂತರ ನಿಮ್ಮ ತಾಯಿಯನ್ನು ನಿಮ್ಮ ಮನೆಗೆ ಕರೆದುಕೊಂಡು ಹೋಗಿ ಇರಿಸಿಕೊಂಡಿರುವುದಾಗಿ ಹೇಳಿದ್ದೀರಿ, ಆದರೆ ಯಾವ ದಿನಾಂಕ ಮತ್ತು ವರ್ಷ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ತಾಯಿಯ ಜೊತೆ ಇರಲೇ ಇಲ್ಲ ಹಾಗಾಗಿ ಅವರನ್ನು ಯಾವ ದಿನಾಂಕದಂದು ನಿಮ್ಮ ಮನೆಗೆ ಕರೆದುಕೊಂಡು ಹೋಗಿದ್ದೀರಿ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು

ಉತ್ತರಿಸುತ್ತಾರೆ. ನಿಮ್ಮ ತಾಯಿಯನ್ನು ವೈ ಎನ್ ಹೊಸಕೋಟೆಯ ದಾವಾ ಷೆಡ್ಯೂಲ್ ಮನೆಯಲ್ಲಿ ನೀವು ಮತ್ತು ನಿಮ್ಮ ಸಹೋದರಿ ನಿಮ್ಮ ತಾಯ ಪಾಲನೆ ಪೋಷಣೆ ಇತ್ಯಾದಿ ನೋಡಿಕೊಳ್ಳುತ್ತಿದ್ದಾಗಿ ಖಂಡಿಕೆ 6 ರಲ್ಲಿ ಸುಳ್ಳು ಹೇಳಿದ್ದೀರಿ ಎಂದರೆ ಸಾಕ್ಷಿ ಸುಳ್ಳಲ್ಲ ನೋಡಿಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ನಾವು ಹೇಗೆ ನೋಡಿಕೊಂಡಿದ್ದೇವೆ ಎಂಬುದಕ್ಕೆ ಸಿ ಡಿ ಯನ್ನು ಸಹ ಹಾಜರುಪಡಿಸಿದ್ದೇವೆ ಎಂದು. ನಿಡಿ.11 ರಲ್ಲಿ ಯಾವಾಗ ಡೌನ್ ಲೋಡ್ ಮಾಡಿರುತ್ತೀರಿ ದಿನಾಂಕ ಹೇಳಬಹುದಾ ಎಂದರೆ ಸಾಕ್ಷಿ ನಮ್ಮ ಮೊಬೈಲಗಳಲ್ಲಿ ವಿಡಿಯೋ ಮಾಡಿರುತ್ತೇವೆ ದಿನಾಂಕ ಹೇಳಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಡಿಯೋವನ್ನು ನನ್ನ ಆ್ಯಪಲ್ ಕಂಪನಿಯ ಮೊಬೈಲನಿಂದ ಮಾಡಿರುತ್ತೇವೆ. ನಿಮ್ಮ ಮೊಬೈಲನಿಂದ ಸಿ ಡಿ ಗೆ ವಿಡಿಯೋವನ್ನು ಯಾವ ಕಂಪ್ಯೂಟರ್ ಸೆಂಟರ್ ಗೆ ಹೋಗಿ ಡೌನ್ ಲೋಡ್ ಮಾಡಿಸಿರುತ್ತಿರೀ ಎಂದರೆ ಸಾಕ್ಷಿ ಮನೆಯ ಅಕ್ಕಪಕ್ಕದಲ್ಲಿಯೇ ಮಾಡಿಸಿದ್ದೇನೆ ಹೆಸರು ನೆನಪಿಲ್ಲ ಎಂದು ಉತ್ತರಿಸುತ್ತಾರೆ. ವಿಡಿಯೋದಲ್ಲಿ ಏನು ಇದೆ ಎಂಬುದು ನಿಮಗೇನು ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಗೆ ನನ್ನ ಮಗ ವಿಡಿಯೋ ತೆಗೆದಿರುವುದು ಎಂದು ಉತ್ತರಿಸುತ್ತಾರೆ. ನಿಡಿ.11 ರಲ್ಲಿ ವಿಡಿಯೋ ತೆಗೆದಿರುವ ದಿನಾಂಕ ಇದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ.12 ಮರಣ ಪ್ರಮಾಣ ಪತ್ರದಲ್ಲಿ ನಿಮ್ಮ ತಾಯಿ ಖಾಯಂ ವಿಳಾಸ ವೈ ಎನ್ ಹೊಸಕೋಟೆ ಎಂದು ನಮೂದು ಇದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಡಿ.12 ರಲ್ಲಿ ನಿಮ್ಮ ತಾಯಿ ತೀರಿಕೊಳ್ಳುವ ಕಾಲಕ್ಕೆ ಶಾರದಾಂಬಾ ಟ್ರಸ್ಟ, ಜಯನಗರ, ತುಮಕೂರು ಎಂಬ ವಿಳಾಸವನ್ನು ನೀವೇ ಸೃಷ್ಟಿಸಿದ್ದೀರಿ, ಅವರು ತೀರಿಕೊಂಡಿದ್ದು ವೈ ಎನ್ ಹೊಸಕೋಟೆಯಲ್ಲಿಯೇ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನನ್ನ ತಾಯಿಯ ಅಂತ್ಯ ಸಂಸ್ಕಾರವನ್ನು ತುಮಕೂರಿನ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ರುದ್ರಭೂಮಿಯಲ್ಲಿ ಸುಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ನಿಡಿ.11 ರಲ್ಲಿ ಇರುವ ವಿಡಿಯೋ ನನ್ನ ತಾಯಿ ಶಾರದಾಂಬಾ ಟ್ರಸ್ಟರೆ ಸೇರಿಸಿಸುವುದಕ್ಕಿಂತ

ಮೊದಲು ನಮ್ಮ ಮನೆಯಲ್ಲಿ ಇದ್ದು ಹಾಸಿಗೆ ಹಿಡಿದ ಸಮಯದಲ್ಲಿ ತೆಗೆದುಕೊಂಡಿರುವುದು. ನೀವು ಉದ್ದೇಶಪೂರ್ವಕವಾಗಿ ನಿಮಗೆ ಬೇಕಾದಂತೆ ವಿಡಿಯೋ ಮಾಡಿಕೊಳ್ಳಲು ಶಾರದಾಂಬಾ ಟ್ರಸ್ಟನಿಂದ ನಿಮ್ಮ ತಾಯಿಯನ್ನು ಕರೆದುಕೊಂಡು ಬಂದು ವಿಡಿಯೋ ಮಾಡಿಕೊಂಡು ನಂತರ ಅವರನ್ನು ಶಾರದಾಂಬಾ ಟ್ರಸ್ಟಗೆ ಬಿಟ್ಟು ಬಂದಿದ್ದಿರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಡಿ.11 ರಲ್ಲಿ ಇರುವ ಅಂಶಗಳೆಲ್ಲಾ ಸುಳ್ಳು ನಿಮಗೆ ಬೇಕಾದಂತೆ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

ನಿಮ್ಮ ಪ್ರಮಾಣ ಪತ್ರದ ಖಂಡಿಕೆ 7 ರಲ್ಲಿ ನಿಮ್ಮ ತಾಯಿ ಸ್ವತಃ ಆಕೆಯ ಕೆಲಸಗಳನ್ನು ಮಾಡಿಕೊಳ್ಳಲು ಆಗದ ಸ್ಥಿತಿಯಲ್ಲಿ ಇದ್ದುದರಿಂದ ಆಕೆಯನ್ನು ನೋಡಿಕೊಳ್ಳಲು ಸಾಧ್ಯವಾಗದೇ ಆಕೆಯ ಮೇಲ್ವಿಚಾರಣೆಗೆ ಟ್ರಸ್ಟಗೆ ಸೇರಿಸಿರುವುದಾಗಿ ಹೇಳಿರುತ್ತೀರಿ, ವಾದಿಯರಿಗೆ ದಾವಾ ಸ್ವತ್ತು ದಕ್ಕಬಾರದು ಎಂಬ ಉದ್ದೇಶದಿಂದ ಆ ರೀತಿ ನೀವು ಸುಳ್ಳು ಹೇಳಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ವಾದಪತ್ರದ ಶಿರೋನಾಮೆಯಲ್ಲಿ ನಮೂದಿಸಿರುವ ಪ್ರತಿವಾದಿ 1(ಎ) ರಿಂದ (ಡಿ) ರವರು ಲಕ್ಷ್ಮೀದೇವಮ್ಮನವರು ಕಾನೂನು ಬದ್ಧ ವಾರಸುದಾರರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಲಕ್ಷ್ಮೀದೇವಮ್ಮನವರ ಕಾನೂನು ಬದ್ಧ ವಾರಸುದಾರರಾಗಿರುವ ಕಾರಣ ನಿಪಿ.1 ಕರಾರು ಪತ್ರದ ಪ್ರಕಾರ ವಾದಿಯರಿಗೆ ಹೆಸರಿಗೆ ಕ್ರಯಪತ್ರ ನೋಂದಣಿ ಮಾಡಿಸಿಕೊಡಲು ಬಾಧ್ಯಸ್ತರು ಎಂದರೆ ಸಾಕ್ಷಿ ನಮ್ಮ ತಾಯಿ ಕರಾರು ಪತ್ರವನ್ನು ಮಾಡಿಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ಕರಾರುಪತ್ರವನ್ನು ಮಾಡಿಕೊಟ್ಟಿದ್ದರು ಸಹ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ವಾದಿಯರಿಗೆ ಕ್ರಯಪತ್ರ ನೋಂದಣಿ ಮಾಡಿಕೊಡಬೇಕಾಗುತ್ತದೆ ಎಂದು ನೀವು ಮತ್ತು ನಿಮ್ಮ ಸಹೋದರ, ಸಹೋದರಿಯರು ಸೇರಿಕೊಂಡು ದಿಃ 26.11.2021

OS 85/2021

DW-1

ರಂದು ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಅದು ನನ್ನ ತಾಯಿಯ ಕೊನೆಯ ಆಸೆಯಾಗಿತ್ತು ನ್ಯಾಯಾಲಯದಲ್ಲಿ ಕೇಸು ಯಾವಾಗ ಮುಗಿಯುತ್ತದೆಯೋ ಗೊತ್ತಿಲ್ಲ, ಹಾಗಾಗಿ ವಿಭಾಗ ಮಾಡಿಕೊಳ್ಳಿ ಎಂದು ನನ್ನ ತಾಯಿ ಹೇಳಿದರು ಎಂದು ಉತ್ತರಿಸುತ್ತಾರೆ. ನಿಪಿ.8 ರಲ್ಲಿ ಇರುವ ನಿಮ್ಮ ತಾಯಿಯ ಎಡಗೈ ಹೆಬ್ಬೆಟ್ಟಿನ ಗುರುತು ಹಾಗೂ ನಿಪಿ.1 ರಲ್ಲಿ ಇರುವ ಎಡಗೈ ಹೆಬ್ಬೆಟ್ಟಿನ ಗುರುತು ಎರಡು ಒಂದೇ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಮ್ಮ ತಾಯಿ ಎಸ್ ಪಿ ಎ ಬರೆದುಕೊಟ್ಟ ನಂತರ ವಿಭಾಗ ಪತ್ರ ಮಾಡಿಕೊಟ್ಟಿದ್ದಾರೆ. ನಿಪಿ.1 ರಲ್ಲಿ ನಿಮ್ಮ ತಾಯಿಯ ಹೆಬ್ಬೆಟ್ಟಿನ ಗುರುತನ್ನು ಪತ್ರ ಬರಹಗಾರರು ಉದ್ದವಾಗಿ ಹಾಕಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ವಾದಿಯರಿಗೆ ಕ್ರಯಪತ್ರ ಮಾಡಿಕೊಡುವದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದೂ ಸೂಚಿಸುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.